ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆಗೆ ಆಧಾರದ ವೈದ್ಯರನ್ನು ನೇಮಿಸುವ ಮೂಲಕ, ಸ್ನಾತಕೋತ್ತರ ವ್ಯಾಸಂಗದಿಂದ ಹಿಂದಿರುಗುವ ವೈದ್ಯರನ್ನು ನೇಮಿಸುವ ಮೂಲಕ ಮತ್ತು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ನೇಮಕ ಮಾಡುವ ಮೂಲಕ ತುಂಬಲು ಈಗಾಗಲೇ ಕ್ರಮ ಕೈಗೊಳ್ಳಲಾಗಿರುತ್ತದೆ.

ಕಿರಿಯ ಆರೋಗ್ಯ ಸಹಾಯಕ:ಸಹಾಯಕಿ, ಪ್ರಥಮ ದರ್ಜೆ ಹುದ್ದೆ ಹಾಗೂ ಇತರೆ ವರ್ಗದ ಖಾಲಿ ಹುದ್ದೆಗಳನ್ನು ತುಂಬಲು ಆರ್ಥಿಕ ಇಲಾಖೆಯು ಈಗಾಗಲೇ ಆರ್ಥಿಕ ನಿರ್ಬಂಧ ಸಡಿಲಗೊಳಿಸಿದ್ದು, ಸಮಾಜ ಕಲ್ಯಾಣ ಇಲಾಖೆಯ ನೇಮಕಾತಿಗೆ ಮೀಸಲಾತಿಯ ಆದೇಶವನ್ನು ಇತ್ತೀಚೆಗೆ ಹೊರಡಿಸಲಾಗಿದ್ದು, ಈ ಉಳಿದ ಸಿಬ್ಬಂದಿಯ ಹುದ್ದೆಗಳನ್ನು ತುಂಬಲು ಆದಷ್ಟು ಕೂಡಲೇ ಕ್ರಮ ಕೈಗೊಳ್ಳಲಾಗುವುದು.

(2) ದ.ಕ. ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಹುದ್ದೆ ಭರ್ತಿ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಭಾಧ್ಯಕ್ಷರೇ, ವರ್ಗಾವಣೆಯಿಂದ ಖಾಲಿ ಆಗಿರುವ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಹುದ್ದೆ ಹಾಗೂ ಖಾಲಿ ಆಗಿರುವ ಉಡುಪಿ ತಾಲ್ಲೂಕು ಪಂಚಾಯಿತಿ ಸಹಿತ ಇತರ ತಾಲ್ಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡದೇ ದೈನಂದಿನ ಅಭಿವೃದ್ಧಿ ಕಾರ್ಯಗಳಿಗೆ ತೊಡಕು ಉಂಟಾಗಿದೆ. ಸರ್ಕಾರ ಈ ಬಗ್ಗೆ ಯಾವ ನಿರ್ಧಾರ ಕೈಗೊಳ್ಳುತ್ತದೆ ಎಂದು ಸ್ಪಷ್ಟಪಡಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹೇಳಿಕೆಯನ್ನು ಕೊಡಬಯಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಹುದ್ದೆಯು ಐಎಎಸ್ ವರ್ಗದ ಹುದ್ದೆಯಾಗಿದ್ದು, ಈ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಕ್ರಮ ಕೈಗೊಳ್ಳುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 8 ತಾಲ್ಲೂಕು ಪಂಚಾಯಿತಿಗಳಿದ್ದು, ಎಲ್ಲಾ ತಾಲ್ಲೂಕು ಪಂಚಾಯಿತಿಗಳಿಗೆ ಕಾರ್ಯನಿರ್ವಹಣಾ ಅಧಿಕಾರಿಗಳನ್ನು ನೇಮಕ ಮಾಡಿ ಈಗಾಗಲೇ ಆದೇಶ ಹೊರಡಿಸಲಾಗಿದೆ. ನೇಮಿಸಿರುವ ಸ್ಥಳಗಳಿಗೆ ಕೆಲವು ಅಧಿಕಾರಿಗಳು ಈಗಾಗಲೇ ಹಾಜರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ನೇಮಿಸಿದ ಸ್ಥಳಕ್ಕೆ ಹಾಜರಾಗದೇ ಇರುವ ಅಧಿಕಾರಿಗಳಿಗೆ ಕೂಡಲೇ ಹಾಜರಾಗಲು ಸೂಚನೆಯನ್ನು ನೀಡಲಾಗಿದೆ. ಗೈರು ಹಾಜರಾದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುತ್ತೇವೆಂದು ಈ ದಿನವೇ ಎಚ್ಚರಿಕೆ ನೋಟೀಸನ್ನು ಕೊಡಲಾಗಿದೆ.

ಅಧ್ಯಕ್ಷರು : ಅರಗ ಜ್ಞಾನೇಂದ್ರ ಅವರ ಸೂಚನೆಯನ್ನು ಬಾಲಕೃಷ್ಣ ಅವರು ಕೇಳುತ್ತಾರೆ.

(ii) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜು

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ವಿದ್ಯುತ್ ಇಲಾಖೆಯ ಎಂಆರ್‌ಎಸ್‌ನಿಂದ ತೀರ್ಥಹಳ್ಳಿ ತಾಲ್ಲೂಕಿನ ಮಂದಗದ್ದೆವರೆಗೆ ಸುಮಾರು 35 ಕಿ.ಮೀ. 11 ಕೆ.ವಿ.ಎ. ಲೈನ್ ಎಳೆದು ಸುಮಾರು 20 ವರ್ಷಗಳಾಗಿದೆ. ಇದುವರೆಗೂ ಇದರಿಂದ ವಿದ್ಯುತ್ ಸರಬರಾಜು ಮಾಡಿಲ್ಲ. ಬಳಕೆದಾರನಿಗೆ ಕೊಡಲು ಸಾಧ್ಯವಾಗದೇ ಇಲಾಖೆಯ ತಂತಿ ಮತ್ತು ಅವರ ಬೆಲೆ ಬಾಳುವ ವಸ್ತುಗಳು ಕಳ್ಳತನವಾಗಿ ಇಲಾಖೆಗೆ ಅಪಾರ ನಷ್ಟ ಸಂಭವಿಸಿರುತ್ತದೆ. ಸಾರ್ವಜನಿಕರು ಮತ್ತು ಜನಪ್ರತಿನಿಧಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದಾಗ್ಯೂ ಉಳಿಸಲು ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಈ ರೀತಿ ಸಾರ್ವಜನಿಕ ಹಣ ನಷ್ಟ ಮಾಡಿದ ಸಂಬಂಧಿಸಿದ

ಅಧಿಕಾರಿಗಳ ಮೇಲೆ ಸೂಕ್ತ ಕ್ರಮವನ್ನು ಜರುಗಿಸಬೇಕು ಮತ್ತು ಏನು ಇವರು ಈ ಲೈನ್ ಅನುಪಯುಕ್ತ ಅಂದರೆ ಅದನ್ನು ಬಿಚ್ಚಿ ಉಳಿದ ಕಂಬ ಮತ್ತು ಇತರ ವಸ್ತುಗಳನ್ನು ರಕ್ಷಣೆ ಮಾಡಲು ಮಾನ್ಯ ಉಪ ಮುಖ್ಯ ಮಂತ್ರಿಗಳನ್ನು ಕೋರುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಅನುಮತಿ ಮೇರೆಗೆ ಉಪ ಮುಖ್ಯಮಂತ್ರಿಗಳ ಉತ್ತರವನ್ನು ಓದುತ್ತಿದ್ದೇನೆ.

ಶಿವಮೊಗ್ಗದ ಎಂ.ಆರ್.ಎಸ್.ನಿಂದ ತೀರ್ಥಹಳ್ಳಿ ತಾಲ್ಲೂಕಿನ ಮಂದಗದ್ದೆಯವರೆಗೆ 11 ಕೆ.ವಿ. ಲೈನನ್ನು ನಿರ್ಮಾಣ ಮಾಡುವಾಗ ನ್ಯಾಯಾಲಯದಲ್ಲಿ ಪ್ರಕರಣವು ದಾಖಲಾದ್ದರಿಂದ, ನಿರ್ಮಾಣ ಕಾರ್ಯವು ಅಪೂರ್ಣಗೊಂಡು ಸ್ಥಗಿತವಾಗಿತ್ತು. ಶಿವಮೊಗ್ಗದಿಂದ ಸೂಳೇಬೈಲಿನವರೆಗಿನ ಲೈನಿನ ಭಾಗವನ್ನು ಚಾಲನೆಗೊಳಿಸಿ ಉಪಯೋಗಿಸಲಾಗುತ್ತಿದೆ. ಬಾಕಿ ಉಳಿದ ಅಪೂರ್ಣ ಲೈನ್ ಪ್ರಸ್ತುತ ನಿರುಪಯುಕ್ತವಾಗಿರುವುದರಿಂದ ಇದನ್ನು ಬಿಚ್ಚಲು (ಡಿಸ್‌ಮ್ಯಾಂಟಲ್) ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಮಳೆಗಾಲ ಕಳೆದ ನಂತರ ಈ ಕಾರ್ಯವನ್ನು ತ್ವರಿತಗತಿಯಲ್ಲಿ ನಿರ್ವಹಿಸಿ, ಬಿಚ್ಚಲ್ಪಟ್ಟ ಸಾಮಗ್ರಿಗಳನ್ನು ಉಗ್ರಾಣಕ್ಕೆ ಮರುಳಿಸಲಾಗುವುದು.

ಈ ಅಪೂರ್ಣ ಲೈನಿನ ಕೆಲವು ಸಾಮಗ್ರಿಗಳನ್ನು ಬಿಚ್ಚಿ ಮಂಡಳಿಯ ಇತರ ಕೆಲಸಗಳಿಗೆ ಉಪಯೋಗಿಸಲಾಗಿದೆ, ಕೆಲವು ಸಾಮಗ್ರಿಗಳು ಕಳ್ಳತನಗೊಂಡಿದ್ದು, ಪೋಲಿಸ್ ದೂರುಗಳನ್ನು ದಾಖಲು ಮಾಡಲಾಗಿದ್ದು, ಪೋಲೀಸ್ ತನಿಖೆಯು ನಡೆಯುತ್ತಿದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಒಂದು ವಿಷಯ ಹೇಳಬೇಕು. ಮಾನ್ಯ ಶ್ರೀ ಶಿವರಾಮು ಅವರು ಕೇಳಿದ ಪ್ರಶ್ನೆ ಇದೆ. ಅವರು ಕೇಳಿದ ಪ್ರಶ್ನೆಗೆ ಈಗ 20.9.95ವರೆಗೆ ಟೈಮ್ ಕೊಡುವುದಕ್ಕೆ ಅವಕಾಶ ಮಾಡಿ ಕೊಡಲಾಗಿದೆ.

ಶ್ರೀ ಬಿ. ಶಿವರಾಮು : ಥ್ಯಾಂಕ್ಸ್.

ಅಧ್ಯಕ್ಷರು : ಕನ್ನಡದಲ್ಲಿ ಥ್ಯಾಂಕ್ಸ್ ಹೇಳಿ.

(iii) ದ.ಕ. ಜಿಲ್ಲೆಯ ಲ್ಯಾಂಪ್ಸ್ ಸೊಸೈಟಿಗಳಲ್ಲಿ ನಷ್ಟ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲ್ಯಾಂಪ್ಸ್ ಸೊಸೈಟಿಗಳು ನಷ್ಟದಲ್ಲಿ ನಡೆಯುತ್ತಿರುವುದರ ಬಗ್ಗೆ ಮಾನ್ಯ ಸಹಕಾರ ಸಚಿವರ ಗಮನ ಸೆಳೆಯುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಲ್ಯಾಂಪ್ಸ್ ಸೊಸೈಟಿಗಳಲ್ಲಿ ಸಹಕಾರ ಇಲಾಖೆಯ ಅಧಿಕಾರಿಗಳು ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದು ರಾಜ್ಯದ ವಿವಿಧ ಕಡೆಗಳಲ್ಲಿ ರಾಜ್ಯದ ಅರಣ್ಯ ಇಲಾಖೆಯ ಅಧಿಕಾರಿಗಳು ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಲ್ಯಾಂಪ್ಸ್ ಸೊಸೈಟಿಯೂ ಲಾಭದಾಯಕವಾಗಿ ನಡೆಯುತ್ತಿಲ್ಲ. ಲ್ಯಾಂಪ್ ಸೊಸೈಟಿಗಳ ಮುಖ್ಯ ಉದ್ದೇಶ ಎಂದರೆ, ಹಿರಿಜನರಿಗೆ ಉದ್ಯೋಗ ಒದಗಿಸಿಕೊಡುವುದು ಮತ್ತು ಅರಣ್ಯ ಉತ್ಪನ್ನಗಳ ಸಂಗ್ರಹಣೆ. ಆದರೆ ಅರಣ್ಯಗಳು ಅರಣ್ಯ ಇಲಾಖೆಯ ಹತೋಟಿಯಲ್ಲಿರುವುದರಿಂದ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಲು ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಸಾಧ್ಯವಾಗುತ್ತಿಲ್ಲ, ಆದ್ದರಿಂದ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಕಾರ್ಯದರ್ಶಿಯನ್ನಾಗಿ ಮಾಡಿ ರಾಜ್ಯದಲ್ಲಿರುವ ಇತರ ಘಟಕಗಳಂತೆ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಲ್ಯಾಂಪ್ಸ್ ಸೊಸೈಟಿಗಳಲ್ಲೂ ಲಾಭದಾಯಕವಾಗಿ ನಡೆಯುವಂತೆ